## ದಿನಾಂಕ:11.02.2015 ರಿಂದ 15.2.2015 ರಿಯಾಯಿತಿ ಕನ್ನಡ ಪುಸ್ತಕ ಮೇಳ–2015ರ ಮಳಿಗೆಗಳ ಅರ್ಜಿ ನಮೂನೆ

ಕನ್ನಡ ಪುಸ್ತಕ ಪ್ರಾಧಿಕಾರದಿಂದ ಚಾಮರಾಜನಗರದ ಪೇಟೆ ಶಾಲೆ ಮೈದಾನದಲ್ಲಿ ದಿನಾಂಕ:11.02.2015 ರಿಂದ 15.02.2015ರ ವರೆಗೆ ಒಟ್ಟು ಐದು ದಿನಗಳ ಕಾಲ **'ರಿಯಾಯಿತಿ ಕನ್ನಡ ಪುಸ್ತಕ ಮಾರಾಟ ಮೇಳ–2015'ನ್ನು** ಹಮ್ಮಿಕೊಳ್ಳಲಾಗಿದೆ. ಈ ಪುಸ್ತಕ ಮೇಳದಲ್ಲಿ ಪ್ರಕಾಶನ ಸಂಸ್ಥೆಗಳು/ಪ್ರದರ್ಶಕರು ಭಾಗವಹಿಸಬಹುದಾಗಿದ್ದು, ಮಳಿಗೆಯೊಂದಕ್ಕೆ ರೂ.1,500–00ಗಳ ಬಾಡಿಗೆ ಹಾಗೂ ರೂ.1,000–00ಗಳ ಭದ್ರತಾ ಠೇವಣಿ ಡಿ.ಡಿ.ಯನ್ನು ಪ್ರತ್ಯೇಕ – ಪ್ರತ್ಯೇಕವಾಗಿ ಆಡಳಿತಾಧಿಕಾರಿಗಳು, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು – ಅವರ ಹೆಸರಿನಲ್ಲಿ ಸಲ್ಲಿಸುವುದು. ಮೇಳದಲ್ಲಿ ಭಾಗವಹಿಸಲು ಇಚ್ಛಿಸುವ ಪ್ರಕಾಶಕರು/ಪ್ರದರ್ಶಕರು ನಿಗದಿತ ಅರ್ಜಿ ನಮೂನೆಯನ್ನು ಕನ್ನಡ ಪುಸ್ತಕ ಪ್ರಾಧಿಕಾರ, ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರಿನ ಕಛೇರಿ ಅಥವಾ ಆಯಾ ಜಿಲ್ಲೆಯಲ್ಲಿರುವ ಸಹಾಯಕ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಛೇರಿಗಳಲ್ಲಿ ಅಥವಾ ಪ್ರಾಧಿಕಾರದ ವೆಬ್‌ಸೈಟ್‌ನಲ್ಲಿ ಅಂದರೆ www.kannadapusthakapradhikara.comನಲ್ಲಿ ದಿನಾಂಕ:27.01.2015 ರಿಂದ ಅರ್ಜಿಯನ್ನು ಉಚಿತವಾಗಿ ಪಡೆದುಕೊಳ್ಳಬಹುದಾಗಿದೆ. ಭರ್ತಿಮಾಡಿದ ಅರ್ಜಿಯನ್ನು ಡಿ.ಡಿ.ಯೊಂದಿಗೆ ದಿನಾಂಕ:03.02.2015 ರಂದು ಸಂಜೆ 5.30ರೊಳಗೆ ಆಡಳಿತಾಧಿಕಾರಿಗಳು, ಕನ್ನಡ ಪುಸ್ತಕ ಪ್ರಾಧಿಕಾರ, ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು – ಅವರ ಹೆಸರಿಗೆ ಸಲ್ಲಿಸಲು ಕೋರಿದೆ.

ಹೆಚ್ಚಿನ ಮಾಹಿತಿಗಾಗಿ : ಆಡಳಿತಾಧಿಕಾರಿಗಳು, ಕನ್ನಡ ಪುಸ್ತಕ ಪ್ರಾಧಿಕಾರ, ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು–560 002 ದೂ:080–22484516 / 22107704 ಅನ್ನು ಸಂಪರ್ಕಿಸಬಹುದಾಗಿದೆ.

**ನಿಯಮಗಳು**

೧. ರಿಯಾಯಿತಿ ಕನ್ನಡ ಪುಸ್ತಕ ಮಾರಾಟ ಮೇಳ-೨೦೧೫ನ್ನು ೧೧.೦೨.೨೦೧೫ ರಿಂದ ೧೫.೦೨.೨೦೧೫ರವರೆಗೆ ಚಾಮರಾಜನಗರದ ಪೇಟೆ ಶಾಲೆ ಮೈದಾನದಲ್ಲಿ ಏರ್ಪಡಿಸಲಾಗಿದೆ.

೨. ರಿಯಾಯಿತಿ ಕನ್ನಡ ಪುಸ್ತಕ ಮಾರಾಟ ಮೇಳ-೨೦೧೫ರಲ್ಲಿ ಕನ್ನಡ ಪುಸ್ತಕಗಳು ಹಾಗೂ ಕನ್ನಡದಿಂದ ಇತರೆ ಭಾಷೆಗಳಿಗೆ ಭಾಷಾಂತರಗೊಂಡ ಪುಸ್ತಕಗಳ ಪ್ರದರ್ಶನ ಮತ್ತು ಮಾರಾಟಕ್ಕೆ ಮಾತ್ರ ಅವಕಾಶವಿರುತ್ತದೆ.

೩. ಮಳಿಗೆಯ ವಿಸ್ತೀರ್ಣ ೧೦ x ೧೦ ಅಡಿ

೪. ಮಳಿಗೆ ಒಂದಕ್ಕೆ ಬಾಡಿಗೆ ೧೫೦೦/- + ಠೇವಣಿ ೧೦೦೦/- ಡಿ.ಡಿ.ಯನ್ನು ಆಡಳಿತಾಧಿಕಾರಿಗಳು ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು ಇವರ ಹೆಸರಿನಲ್ಲಿ ಪ್ರತ್ಯೇಕವಾಗಿ ಪಡೆಯುವುದು. ಹೆಚ್ಚಿನ ಮಳಿಗೆಯೊಂದಕ್ಕೆ ಬಾಡಿಗೆ ಮೊತ್ತ ಪ್ರತಿ ಮಳಿಗೆಗೆ ರೂ. ೧೫೦೦/- ಡಿ.ಡಿ.ಯನ್ನು ಪ್ರತ್ಯೇಕವಾಗಿ ಪಡೆಯುವುದು.

೫. ನಿಗದಿತ ಅರ್ಜಿಯ ಜೊತೆ ಆಡಳಿತಾಧಿಕಾರಿ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು ಅವರ ಹೆಸರಿನಲ್ಲಿ ಡಿ.ಡಿ.ಯನ್ನು ಕಳುಹಿಸಿಕೊಡಬೇಕು. ಪ್ರದರ್ಶಕರು ಮೇಳದಲ್ಲಿ ಭಾಗವಹಿಸಲು ಒಪ್ಪಿ ನಂತರ ಭಾಗವಹಿಸದಿದ್ದರೆ ಅಥವಾ ಭಾಗವಹಿಸಿ ಅವಧಿಯ ಮಧ್ಯದಲ್ಲಿ ತಮ್ಮ ಮಳಿಗೆಯನ್ನು ಮುಚ್ಚಿದರೆ ಬಾಡಿಗೆ ಹಣವನ್ನಾಗಲೀ / ಠೇವಣಿ ಹಣವನ್ನಾಗಲೀ ಹಿಂದಿರುಗಿಸಲಾಗುವುದಿಲ್ಲ.

೬. ಠೇವಣಿ ಹಣವನ್ನು ಮೇಳ ಮುಗಿದ ನಂತರ ಹಿಂದಿರುಗಿಸಲಾಗುವುದು.

೭. ಒಂದಕ್ಕಿಂತ ಹೆಚ್ಚು ಮಳಿಗೆ ಬೇಕಾದರೆ ಮಳಿಗೆ ಒಂದಕ್ಕೆ ರೂ. ೧೫೦೦-೦೦ ಹೆಚ್ಚುವರಿಯಾಗಿ ಪಾವತಿಸಬೇಕು. ಹೆಚ್ಚಿನ ಮಳಿಗೆಗಳಿಗೆ ಠೇವಣಿ ಪಾವತಿ ಮಾಡಬೇಕಾಗಿಲ್ಲ. ಹೆಚ್ಚುವರಿ ಮಳಿಗೆಯನ್ನು ಆದ್ಯತೆಯ ಮೇರೆಗೆ ನೀಡಲಾಗುವುದು.

೮. ಪ್ರಕಾಶನ ಸಂಸ್ಥೆಗಳು ತಮ್ಮ ಸಂಸ್ಥೆಯಿಂದ ಪ್ರಕಾಶನಗೊಂಡಿರುವ ಪುಸ್ತಕಗಳ ವಿವರಗಳನ್ನು ಈ ಅರ್ಜಿಯೊಂದಿಗೆ ಕಡ್ಡಾಯವಾಗಿ ಸಲ್ಲಿಸತಕ್ಕದ್ದು. ಪ್ರತಿಯೊಂದು ಮಳಿಗೆಯೂ ಪುಸ್ತಕಗಳಿಂದ ಸಂಪೂರ್ಣವಾಗಿ ಸಜ್ಜಾಗಿರಬೇಕು. ಖಾಲಿ ಇರಬಾರದು.

೯. ಪ್ರತಿ ಮಳಿಗೆ ಮುಂಭಾಗಕ್ಕೆ ಒಂದೇ ರೀತಿಯಲ್ಲಿ ಪ್ರಕಾಶನ ಸಂಸ್ಥೆಯ ಹೆಸರನ್ನು ಅರ್ಜಿಯಲ್ಲಿ ತಿಳಿಸಿದಂತೆ ಬರೆಸಿ ಸಜ್ಜುಗೊಳಿಸಲಾಗುವುದು. ಯಾವುದೇ ಕಾರಣಕ್ಕೂ ವೈಯಕ್ತಿಕ ಬ್ಯಾನರ್, ಫ್ಲೆಕ್ಸ್‌ಗಳನ್ನು ಪ್ರದರ್ಶಿಸಲು ಅವಕಾಶವಿರುವುದಿಲ್ಲ.

೧೦. ಮೇಳದಲ್ಲಿ ಪ್ರದರ್ಶಕರು ಕನಿಷ್ಠ ಶೇಕಡಾ ೧೫ ರಿಯಾಯಿತಿ ದರದಲ್ಲಿ ಪುಸ್ತಕಗಳನ್ನು ಮಾರಾಟ ಮಾಡಲೇಬೇಕು.

೧೧. ಪುಸ್ತಕಗಳ ಮಾರಾಟಕ್ಕೆ ತಪ್ಪದೆ ಬಿಲ್ಲನ್ನು ಹಾಕಬೇಕು.

೧೨. ತಮ್ಮ ಮಳಿಗೆಯಿಂದ ಎಷ್ಟು ಪುಸ್ತಕಗಳು ಮಾರಾಟವಾದವು? ಎಷ್ಟು ಮೊಬಲಗು ಆಯಿತು? ಎಂದು ಪ್ರತಿ ಮಳಿಗೆಯವರು ದಿನದ ಕೊನೆಗೆ ಪ್ರಾಧಿಕಾರದ ಸ್ವಾಗತ ಕಚೇರಿಗೆ ವರದಿ ನೀಡುವುದು.

೧೩. ಪ್ರದರ್ಶನ ಹಾಗೂ ಮಾರಾಟದ ಸಮಯ ಪ್ರತಿ ದಿನ ಬೆಳಗ್ಗೆ ೧೦.೦೦ ರಿಂದ ರಾತ್ರಿ ೮.೦೦ ಗಂಟೆಯವರೆಗೆ ಇರುತ್ತದೆ.

೧೪. ಪ್ರದರ್ಶಕರು ತಮ್ಮ ಮಳಿಗೆಯನ್ನು ತೆರೆಯಲು ಅರ್ಧ ಗಂಟೆ ಮುಂಚಿತವಾಗಿ ಬರಬೇಕು. ಸಕಾಲಕ್ಕೆ ಬಾರದಿದ್ದರೆ ಮಳಿಗೆಯ ಜವಾಬ್ದಾರಿ ವ್ಯವಸ್ಥಾಪಕರದಲ್ಲ ಹಾಗೂ ರಾತ್ರಿ ವೇಳೆಗೆ ೮.೩೦ಕ್ಕೆ ಮಳಿಗೆ ಮುಚ್ಚಿ ಹೊರಹೋಗಬೇಕು.

೧೫. ಸಾರ್ವಜನಿಕರಿಗೆ ಪ್ರವೇಶ ಉಚಿತ.

೧೬. ದಿನಾಂಕ ೧೦.೦೨.೨೦೧೫ ರಂದು ಬೆಳಿಗ್ಗೆ ೧೧.೦೦ ಗಂಟೆಗೆ ಡ್ರಾ ಮಾಡುವ ಮೂಲಕ ಮಳಿಗೆಗಳನ್ನು ವಿತರಿಸಲಾಗುವುದು. ಡ್ರಾ ಸಂದರ್ಭದಲ್ಲಿ ಪ್ರದರ್ಶಕರು/ ಪ್ರಕಾಶಕರು ಹಾಜರಿರಬಹುದು.

೧೭. ಪುಸ್ತಕ ಮೇಳದ ಪ್ರಾರಂಭದ ಹಿಂದಿನ ದಿನವೇ ಪ್ರದರ್ಶಕರು ತಮ್ಮ ಮಳಿಗೆಗಳನ್ನು ವಶಕ್ಕೆ ತೆಗೆದುಕೊಂಡು ಸಜ್ಜುಗೊಳಿಸಬೇಕು.

೧೮. ದಿನಾಂಕ:೧೦.೦೨.೨೦೧೫ರಂದು ಸಂಜೆ ೬.೦೦ ಗಂಟೆಯ ಒಳಗೆ ತಮಗೆ ಹಂಚಿಕೆ ಮಾಡಲಾದ ಮಳಿಗೆಯಲ್ಲಿ ವ್ಯವಸ್ಥಿತವಾಗಿ ಪುಸ್ತಕಗಳನ್ನು ಜೋಡಿಸಿ ಕಡ್ಡಾಯವಾಗಿ ಸಜ್ಜುಗೊಳಿಸಿಕೊಂಡಿರಬೇಕು.

೧೯. ಪುಸ್ತಕ ಮಾರಾಟ ಮೇಳದ ಅವಧಿಯಲ್ಲಿ ಮಳಿಗೆಯ ಪ್ರಕಾಶಕರು /ಮಾರಾಟಗಾರರಿಗೆ ಊಟ, ವಸತಿ ಒದಗಿಸುವ ಯಾವುದೇ ವ್ಯವಸ್ಥೆ ಇರುವುದಿಲ್ಲ. ಅವರವರೇ ಸದರಿ ವ್ಯವಸ್ಥೆಯನ್ನು ಮಾಡಿಕೊಳ್ಳತಕ್ಕದ್ದು.

೨೦. ಅರ್ಜಿ ಸಲ್ಲಿಸಲು ಕಡೆಯ ದಿನಾಂಕ ೦೨.೦೨.೨೦೧೫ ಮಧ್ಯಾಹ್ನ ೧.೦೦ ಗಂಟೆಯವರೆಗೆ

೨೧. ನಿಷೇಧಿತ ಹಾಗೂ ಆಕ್ಷೇಪಾರ್ಹ ಪುಸ್ತಕಗಳನ್ನು ಮಾರಾಟ ಮಾಡಬಾರದು.

೨೨. ಯಾವುದೇ ರೀತಿಯ ಧ್ವನಿವರ್ಧಕಗಳನ್ನು ಮಳಿಗೆಯಲ್ಲಿ ಹಾಕಬಾರದು.

೨೩. ಹೆಚ್ಚುವರಿ ಟೇಬಲ್ ಬೇಕಾದವರು ಟೆಂಡರ್ ದಾರರಿಗೆ ಹಣ ಪಾವತಿಸಿ ಅವರಿಂದ ಪಡೆಯಬಹುದು.

೨೪. ಮಳಿಗೆಗಳಲ್ಲಿ ಪುಸ್ತಕಗಳನ್ನು ಹೊರತುಪಡಿಸಿ ಬೇರೆ ಯಾವುದೇ ವಸ್ತುಗಳನ್ನು ಮಾರಾಟ ಮಾಡಬಾರದು. ವಿಶ್ವಕೋಶ ಇತ್ಯಾದಿ ಸಂಪುಟಗಳ ಡಿ.ವಿ.ಡಿ.ಗಳಿಗೆ ಈ ನಿಯಮ ಅನ್ವಯವಾಗುವುದಿಲ್ಲ. (ಉದಾಹರಣೆ : ಸಿ.ಡಿ., ಕ್ಯಾಸೆಟ್, ಇತ್ಯಾದಿಗಳು) ವಿಶ್ವಕೋಶ ಇತ್ಯಾದಿ ಸಂಪುಟಗಳ ಡಿ.ವಿ.ಡಿ.ಗಳಿಗೆ ಈ ನಿಯಮ ಅನ್ವಯವಾಗುವುದಿಲ್ಲ.

೨೫. ಎಲ್ಲಾ ವಿಷಯಗಳಲ್ಲಿಯೂ ಕನ್ನಡ ಪುಸ್ತಕ ಪ್ರಾಧಿಕಾರದ ತೀರ್ಮಾನವೇ ಅಂತಿಮ.

೨೬. ಅರ್ಜಿ ನಮೂನೆ ಹಾಗೂ ನಿಯಮಗಳು ಕನ್ನಡ ಪುಸ್ತಕ ಪ್ರಾಧಿಕಾರದ ವೆಬ್‌ಸೈಟ್ www.kannadapustakapradhikara.com ನಲ್ಲಿ ದೊರೆಯುತ್ತದೆ ಹಾಗೂ ಪ್ರತಿ ಜಿಲ್ಲಾ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಲ್ಲಿ ಪಡೆಯಬಹುದಾಗಿದೆ.

**ಸೌಭಾಗ್ಯ**
ಆಡಳಿತಾಧಿಕಾರಿ (ಪ್ರ)
ಕನ್ನಡ ಪುಸ್ತಕ ಪ್ರಾಧಿಕಾರ
ಬೆಂಗಳೂರು

ದೂರವಾಣಿ ಸಂಖ್ಯೆ: ೦೮೦-೨೨೪೮೪೫೧೬ / ೨೨೧೦೭೭೦೪

# ರಿಯಾಯಿತಿ ಕನ್ನಡ ಪುಸ್ತಕ ಮಾರಾಟ ಮೇಳ-೨೦೧೫

ಕನ್ನಡ ಪುಸ್ತಕೋದ್ಯಮದ ಸರ್ವಾಂಗೀಣ ಅಭಿವೃದ್ಧಿಗೆ ಬದ್ಧವಾದ ಕನ್ನಡ ಪುಸ್ತಕ ಪ್ರಾಧಿಕಾರವು ಹಲವಾರು ರಚನಾತ್ಮಕ ಯೋಜನೆಗಳನ್ನು ಕೈಗೊಂಡಿದೆ. ಕನ್ನಡ ಪುಸ್ತಕಗಳ ಸಗಟು ಖರೀದಿ, ರಾಜ್ಯಾದ್ಯಂತ ಕನ್ನಡ ಪುಸ್ತಕ ಮಳಿಗೆಗಳ ಪ್ರೋತ್ಸಾಹ, ಶಾಲಾ ಕಾಲೇಜು ವಿದ್ಯಾರ್ಥಿಗಳಿಗೆ ವಾಚನಾಭಿರುಚಿ ಕಮ್ಮಟ ಹಾಗೂ ನನ್ನ ಮೆಚ್ಚಿನ ಪುಸ್ತಕ ಕುರಿತು ಅಭಿಪ್ರಾಯ ಮಂಡನೆ ಸ್ಪರ್ಧೆ, ಸರ್ಕಾರಿ ಹಾಗೂ ಅನುದಾನಿತ ಪದವಿ ಕಾಲೇಜು ಹಾಗೂ ಸ್ನಾತಕೋತ್ತರ ಕೇಂದ್ರಗಳಲ್ಲಿ ಪುಸ್ತಕ ಪ್ರೇಮಿ ವಿದ್ಯಾರ್ಥಿ ಬಳಗ ರಚನೆ ಅಥವಾ ಸ್ಥಾಪನೆ, ಅಪರೂಪದ ಅಲಭ್ಯ ಗ್ರಂಥಗಳ ಪುನರ್ ಮುದ್ರಣ, ಲೇಖಕರ - ಪ್ರಕಾಶಕರ - ಮಾರಾಟಗಾರರ - ಓದುಗರ ನಡುವೆ ಚಿಂತನ ಕಮ್ಮಟಗಳನ್ನು ಏರ್ಪಡಿಸುವುದು ಹೀಗೆ ಕನ್ನಡ ಪುಸ್ತಕೋದ್ಯಮ ಬೆಳೆಯಲು ಸರ್ವ ವಿಧದಲ್ಲಿ ನೆರವಾಗುವುದು ಕನ್ನಡ ಪುಸ್ತಕ ಪ್ರಾಧಿಕಾರದ ಪ್ರಮುಖ ಆಶಯ. ಈ ಉದ್ದೇಶಕ್ಕೆ ಪೂರಕವಾಗಿ ರಾಜ್ಯಾದ್ಯಂತ ವಿಭಾಗ ಮಟ್ಟದ ಪುಸ್ತಕ ಮೇಳಗಳನ್ನು ನಡೆಸುವುದು ಕೂಡ ಪ್ರಾಧಿಕಾರದ ಯೋಜನೆಗಳಲ್ಲಿ ಒಂದು. ಒಟ್ಟಾರೆ ಕನ್ನಡ ಪುಸ್ತಕೋದ್ಯಮವು ಜನಪರವಾಗಿ, ವ್ಯಾಪಕವಾಗಿ, ಸಮಗ್ರ 'ಕೃತಿ-ಸಂಸ್ಕೃತಿ'ಯ ಆಂದೋಲನವಾಗಿ ಬೆಳೆದು ಭದ್ರವಾಗಿ ಬೇರೂರುವಂತೆ ಮಾಡುವುದು ಪ್ರಾಧಿಕಾರದ ಉದ್ದೇಶ.

ಕನ್ನಡ ಪುಸ್ತಕಗಳನ್ನು ಜನತೆಯ ಹತ್ತಿರ ಕೊಂಡೊಯ್ಯುವ ಪ್ರಯತ್ನವೇ ರಿಯಾಯಿತಿ ಕನ್ನಡ ಪುಸ್ತಕ ಮಾರಾಟ ಮೇಳ-೨೦೧೫. ಇದನ್ನು ಇದೇ ಫೆಬ್ರವರಿ ೧೧ ರಿಂದ ೧೫ರವರೆಗೆ ಪೇಟೆ ಶಾಲೆ ಮೈದಾನ, ಚಾಮರಾಜನಗರದಲ್ಲಿ ಏರ್ಪಡಿಸಲು ನಿರ್ಧರಿಸಲಾಗಿದೆ. ಈ ಮೇಳದಲ್ಲಿ ಭಾಗವಹಿಸುವ ಕನ್ನಡ ಪುಸ್ತಕ ಪ್ರಕಾಶಕರಿಗೆ ಪುಸ್ತಕ ಮಳಿಗೆಯನ್ನು ಬಾಡಿಗೆಗೆ ನೀಡಲಾಗುವುದು. ರಾಜ್ಯದ ಹಾಗೂ ಹೊರನಾಡಿನ ಎಲ್ಲಾ ಪುಸ್ತಕ ಪ್ರಕಾಶಕರು ಈ ಮೇಳದಲ್ಲಿ ಭಾಗವಹಿಸಬೇಕಾಗಿ ಕಳಕಳಿಯಿಂದ ವಿನಂತಿಸುತ್ತೇನೆ.

**ಡಾ. ಬಂಜಗೆರೆ ಜಯಪ್ರಕಾಶ**
ಅಧ್ಯಕ್ಷರು
ಕನ್ನಡ ಪುಸ್ತಕ ಪ್ರಾಧಿಕಾರ,
ಕನ್ನಡ ಭವನ, ಜೆ.ಸಿ.ರಸ್ತೆ,
ಬೆಂಗಳೂರು -೫೬೦ ೦೦೨

**ಕರ್ನಾಟಕ ಸರ್ಕಾರ**
**ಕನ್ನಡ ಪುಸ್ತಕ ಪ್ರಾಧಿಕಾರ**
**ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು**

# ರಿಯಾಯಿತಿ ಕನ್ನಡ ಪುಸ್ತಕ ಮಾರಾಟ ಮೇಳ ೨೦೧೫

ದಿನಾಂಕ ೧೧.೦೨.೨೦೧೫ ರಿಂದ ೧೫.೦೨.೨೦೧೫ ರವರೆಗೆ
ಸ್ಥಳ : ಪೇಟೆ ಶಾಲೆ ಮೈದಾನ, ಚಾಮರಾಜನಗರ

**ಡಾ. ಬಂಜಗೆರೆ ಜಯಪ್ರಕಾಶ**
ಅಧ್ಯಕ್ಷರು

**ಸೌಭಾಗ್ಯ**
ಆಡಳಿತಾಧಿಕಾರಿ (ಪ್ರ)

## ರಿಯಾಯಿತಿ ಕನ್ನಡ ಪುಸ್ತಕ ಮಾರಾಟ ಮೇಳ - ೨೦೧೫
## (ಭಾಗವಹಿಸಲು ಅರ್ಜಿ ನಮೂನೆ)

ದಿನಾಂಕ ೧೧.೦೨.೨೦೧೫ ರಿಂದ ೧೫.೦೨.೨೦೧೫ ರವರೆಗೆ
ಸ್ಥಳ : ಪೇಟೆ ಶಾಲೆ ಮೈದಾನ, ಚಾಮರಾಜನಗರ

೧. ಪ್ರಕಾಶನ ಸಂಸ್ಥೆಯ ಹೆಸರು

೨. ಪ್ರಕಾಶನ ಸಂಸ್ಥೆಯ ಪೂರ್ಣ ವಿಳಾಸ ಹಾಗೂ ದೂರವಾಣಿ ಸಂಖ್ಯೆ

ಮಾಲೀಕ/ಪ್ರತಿನಿಧಿಗಳ ಹೆಸರು ವಿಳಾಸ ದೂರವಾಣಿ ಸಂಖ್ಯೆ

೩. ಅಗತ್ಯವಿರುವ ಮಳಿಗೆ ಒಂದು ಎರಡು ಮೂರು

೪. ಪ್ರದರ್ಶನ ಹಾಗೂ ಮಾರಾಟಕ್ಕೆ ಇಡಬಹುದಾದ ಶೀರ್ಷಿಕೆಗಳ ಸಂಖ್ಯೆ

೫. ಬಾಡಿಗೆ ರೂ. ೧೫೦೦-೦೦ ಸಂದಾಯ ಮಾಡಲಾಗಿದೆಯೇ?
ಡಿ.ಡಿ./ ರಸೀದಿ ಸಂಖ್ಯೆ ಮತ್ತು ದಿನಾಂಕ

೬. ರೂ.೧೦೦೦/-ಗಳ ಠೇವಣಿ ಕಟ್ಟಲಾಗಿದೆಯೇ?

ಡಿ.ಡಿ. ಸಂ.

೭. ಮಳಿಗೆ ಮುಂದೆ ಬರೆಸಬೇಕಾದ ಹೆಸರನ್ನು ಸ್ಪಷ್ಟವಾಗಿ ತಿಳಿಸಿ

ಚಾಮರಾಜನಗರದಲ್ಲಿ ನಡೆಯಲಿರುವ ರಿಯಾಯಿತಿ ಕನ್ನಡ ಪುಸ್ತಕ ಮಾರಾಟ ಮೇಳ-೨೦೧೫ರ ಯಶಸ್ಸು ಮತ್ತು ಪರಿಣಾಮಕಾರಿ ನಿರ್ವಹಣೆಗೆ ಗೊತ್ತುಪಡಿಸಿದ ಎಲ್ಲಾ ನಿಯಮಗಳನ್ನು ನಾವು ಒಪ್ಪಿಕೊಂಡಿದ್ದು, ಯಾವುದೇ ನಿಯಮಗಳನ್ನು ಉಲ್ಲಂಘನೆ ಮಾಡುವುದಿಲ್ಲವೆಂದು ಪ್ರಮಾಣೀಕರಿಸುತ್ತೇವೆ. ಸಂತೋಷದಿಂದ ಈ ಮೇಳದಲ್ಲಿ ಭಾಗವಹಿಸುತ್ತೇವೆ.

ದಿನಾಂಕ :

ಸ್ಥಳ : ಪ್ರಕಾಶಕರ ಹೆಸರು / ಸಹಿ / ಮುದ್ರೆ